ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ ದಿನಾಂಕ ೩೧ನೇ ಮೇ ೧೯೮೮ ಜ್ಯೇಷ್ಠ ೧೦, ೧೯೧೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಸರ್ಕಾರದ ವಿವಿಧ ಇಲಾಖೆಗಳಲ್ಲಿನ ವಾಹನಗಳು

೧೯೪೫. ಶ್ರೀ ಕೆ. ಪಸಂತ ಬಂಗೇರ (ಬೆಳ್ತಂಗಡಿ).–ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅನೇಕ ವರ್ಷಗಳಿಂದ ವಿವಿಧ ಇಲಾಖೆಗಳಲ್ಲಿ ಹಾಳಾಗಿ ಬಿದ್ದಿರುವ ವಾಹನಗಳ ಸಂಖ್ಯೆ ಎಷ್ಟು (ಇಲಾಖಾವಾರು ಮಾಹಿತಿ ಒದಗಿಸುವುದು) ?

ಆ) ಅನೇಕ ವರ್ಷಗಳಿಂದ ಹಾಳಾಗಿರುವ ವಾಹನಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ೬೬೨

ಇಲಾಖಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ದುರಸ್ತಿಯಾಗದ ದುರಸ್ತಿ ಮಾಡಲಾಗದ ಅನುಪಯುಕ್ತ ವಾಹನಗಳನ್ನು ವಿಲೇವಾರಿ ಮಾಡಲು ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ.

ಅನುಬಂಧ

ಕ್ರ. ಸಂ.	ಇಲಾಖೆ		ವಾಹನಗಳು
೧	ಆಹಾರ ಮತ್ತು ನಾಗರಿಕ ಇಲಾಖೆ	...	೬
೨	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	...	೧೭೯
೩	ಕೃಷಿ ಮತ್ತು ತೋಟಗಾರಿಕೆ ಇಲಾಖೆ	...	೮೩
೪	ಕಂದಾಯ ಇಲಾಖೆ	...	೯
೫	ಗೃಹ ಇಲಾಖೆ	...	೧೪೧
೬	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	...	೬೩
೭	ಪಶು ಸಂಗೋಪನಾ, ಮೀನುಗಾರಿಕೆ ಮತ್ತು ಅರಣ್ಯ ಇಲಾಖೆ	...	೩೫
೮	ಲೋಕೋಪಯೋಗಿ, ಜಲಾನಯನ ಅಭಿವೃದ್ಧಿ ಮತ್ತು ವಿದ್ಯುಚ್ಛಕ್ತಿ ಇಲಾಖೆ	...	೪೧೧
೯	ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ	...	೧
೧೦	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ	...	೬
೧೧	ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ	...	೮
೧೨	ಶಿಕ್ಷಣ ಇಲಾಖೆ	...	೨
೧೩	ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ	...	೭
೧೪	ಸಹಕಾರ ಇಲಾಖೆ	...	೫
೧೫	ಆರ್ಥಿಕ ಇಲಾಖೆ	...	೨
೧೬	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	...	೪
೧೭	ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ	..	–
೧೮	ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ	...	–
೧೯	ವಿಜ್ಞಾನ ಯಂತ್ರಕಲಾ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆ	...	–
೨೦	ಯೋಜನಾ ಇಲಾಖೆ	...	–
		ಒಟ್ಟು	೬೭೨

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೆ, ಒಂದು ವರ್ಷದ ಹಿಂದೆ ಇದೇ ಪ್ರಶ್ನೆಯಂತ್ನ ಕೇಳಿದಾಗ ೬೭೨ ವಾಹನಗಳು ನಾದುರಸ್ತಿಯಲ್ಲಿವೆ, ದುರಸ್ತಿ ಮಾಡಲಾಗದ ವಾಹನಗಳನ್ನು ವಿಲೇವಾರಿ ಮಾಡಲಿಕ್ಕೆ ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ ಎಂದು ಉತ್ತರ ಕೊಟ್ಟಿದ್ದರು. ಇವತ್ತೂ ಕೂಡ ಅದೇ ರೀತಿ ೬೭೨ ವಾಹನಗಳು ಇಲಾಖಾ ಮುಖ್ಯಸ್ಥರಿಗೆ ವಿಲೇವಾರಿ ಮಾಡಲು ಸೂಚನೆ ನೀಡಲಾಗಿದೆ ಎಂದು ಉತ್ತರ ಬಂದಿದೆ, ಈ ಒಂದು ವರ್ಷದಲ್ಲಿ ಯಾವುದೇ ಒಂದು ವಾಹನ ವಿಲೇವಾರಿಯಾಗಿಲ್ಲ. ತಪ್ಪು ಆದೇಶವನ್ನು ಇಲಾಖಾ ಅಧಿಕಾರಿಗಳು ಪರಿಪಾಲಿಸಿಲ್ಲ, ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ —ಈ ವಿಚಾರದಲ್ಲಿ ನಾವು ಒಂದು ಕಮಿಟಿ ಮಾಡಿದ್ದೇವೆ. ಅದಕ್ಕಾಗಿ ಸ್ವಲ್ಪ ವಿಳಂಬವಾಗಿದೆ. ಕಮಿಟಿ ಏತಕ್ಕೆ ಮಾಡಿದ್ದೇವೆಂದರೆ ಒಂದು ಸರ್ಕಾರಿ ವಾಹನ ಎಷ್ಟು ಕಿಲೋ ಮೀಟರ್ ಓಡಿದ ಮೇಲೆ ಅದು ಅನುಪಯುಕ್ತವಾಗುತ್ತದೆ ಎಂದು ಹೇಳುವುದರ ಬಗ್ಗೆ ಮತಭೇದ ಇದೆ ಆದ್ದರಿಂದ ಒಂದು ವಾಹನ ಇಂತಿಷ್ಟು ವರ್ಷ ಉಪಯೋಗಿಸಿದ ಮೇಲೆ ಅನುಪಯುಕ್ತವಾಗುತ್ತದೆಂದು ಹೇಳುವುದಕ್ಕೆ ಒಂದು ಕಮಿಟಿಯನ್ನು ನಾವು ನೇಮಕ ಮಾಡಿದ್ದೇವೆ. ಈಗ ನಾವು ಆ ಕಮಿಟಿಯವರ ಶಿಫಾರಸಿಗೆ ಕಾಯುತ್ತಿದ್ದೇವೆ. ಇದರಲ್ಲಿ ನನ್ನ ಸ್ವಂತ ಅಭಿಪ್ರಾಯವನ್ನು ಸೂಚನೆ ಮಾಡಿದ್ದೇನೆ. ಹಳೆಯ ವಾಹನಗಳು ಎಂದರೆ ಮುಖ್ಯವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು ೧೫–೨೦ ವರ್ಷಗಳ ಹಿಂದೆ ಖರೀದಿ ಮಾಡಿದಂಥ ವಾಹನಗಳು ಇವತ್ತೂ ಸಹ ಇವೆ. ಆ ವಾಹನಗಳನ್ನು ನಡೆಸುವುದರಿಂದ ಏನೂ ಪ್ರಯೋಜನವಿಲ್ಲ. ಏಕೆಂದರೆ ಅವು ಪುನಃ ಹಾಳಾಗುತ್ತವೆ, ನಮ್ಮ ಕೆಲಸವೂ ಹಾಳಾಗುತ್ತದೆ, ಮೇನ್‌ಟೇನ್ ಮಾಡುವುದಕ್ಕೂ ಅಂದರೆ ದುರಸ್ತಿ ಮಾಡುವುದಕ್ಕೂ ಕೂಡ ಬಹಳ ಹಣ ಖರ್ಚು ಬರುತ್ತದೆ, ಆದ್ದರಿಂದ ಇಂತಿಷ್ಟು ವರ್ಷ ಎಂದು ನಿಗದಿಪಡಿಸಿ ಓಡಿಸಿದಮೇಲೆ ಅವುಗಳನ್ನು ಸಾರ್ವಜನಿಕವಾಗಿ ಹರಾಜು ಮಾಡಿದರೆ ಆದರಿಂದ ಸರ್ಕಾರಕ್ಕೆ ಹಣ ಉಳಿಯುತ್ತದೆ ಎನ್ನುವುದಕ್ಕೆ ಅಭಿಪ್ರಾಯವನ್ನು ನಾನು ಹೇಳಿದ್ದೇನೆ. ಮುಂದೆ ಆ ಸಮಿತಿಯವರು ಏನು ಶಿಫಾರಸು ಮಾಡುತ್ತಾರೆ ಅದರ ಮೇಲೆ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ವಸಂತ ಬಂಗೇರ.—ಸ್ವಾಮಿ, ಇಷ್ಟೊಂದು ಕೋಟಿಗಟ್ಟಲೆ ಬೆಲೆ ಬಾಳುವ ವಾಹನಗಳನ್ನು ೧೦–೨೦ ವರ್ಷ ನಿಲ್ಲಿಸಿಕೊಳ್ಳುವುದಕ್ಕೆ ಬದಲಾಗಿ ತಕ್ಷಣ ಹರಾಜು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ತಾವು ಬೇಕಾದರೆ ತನಿಖೆಯನ್ನಾ ನಡೆಸಿದರೆ ಗೊತ್ತಾಗುತ್ತದೆ. ಇವೊತ್ತು ಕೆಟ್ಟು ನಿಂತಿರುವ ವಾಹನಗಳ ಪೈಕಿ ಹೆಚ್ಚಿನ ವಾಹನಗಳಲ್ಲಿ ಮುಖ್ಯವಾಗಿ ಎಂಜಿನ್‌ಗಳಿಲ್ಲ, ಪಾರ್ಟ್ಸ್ ಯಾವುದೂ ಇಲ್ಲ ಟೈರುಗಳು ಇಲ್ಲ. ಇದ್ದರೂ ಯಾವುದೋ ಹಳೆಯ ಟೈರುಗಳನ್ನು ತಂದು ಅದಕ್ಕೆ ಸಿಕ್ಕಿಸಿ ಒಳ್ಳೆಯವನ್ನು ತೆಗೆದುಕೊಂಡು ಹೋಗಿದ್ದಾರೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡಿರಬಹುದು, ಅಥವಾ ಬೇರೆ ನೌಕರರು ಮಾಡಿರಬಹುದು, ಅದು ನನಗೆ ಗೊತ್ತಿಲ್ಲ, ಒಟ್ಟಿನಲ್ಲಿ ಆ ವಾಹನಗಳಲ್ಲಿ ಮುಖ್ಯವಾದ ಪಾರ್ಟ್ಸ್ ಏನೂ ಇಲ್ಲ. ಇಂಜಿನ್‌ಗಳಿಲ್ಲ ಟೈರುಗಳನ್ನು ಯಾವುದರದ್ದೋ ತಂದು ಸಿಕ್ಕಿಸಿದ್ದಾರೆ. ಆದ್ದರಿಂದ ಇದರ ಬಗ್ಗೆ ತನಿಖೆ ಮಾಡಿಸಿ ಇಂಥ ಕೆಟ್ಟ ಕೆಲಸವನ್ನು ಯಾರು ಮಾಡಿದ್ದಾರೆ, ಅಥವಾ ಹಾಗೆ ಮಾಡುವುದಕ್ಕೆ ಯಾರು ಶಾಮೀಲಾಗಿದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.— ನಾನು, ನನ್ನ ಉತ್ತರದಲ್ಲಿ ಹೇಳಿರುವಂತೆ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಂತೆ ಕೆಟ್ಟು ನಿಂತಿರುವ ವಾಹನಗಳನ್ನು ೯೬೨. ಇವುಗಳಲ್ಲಿ ಯಾವ ಇಲಾಖೆಯ ವಾಹನಗಳನ್ನು ತನಿಖೆ ಮಾಡಿಸಬೇಕು ? ಯಾವ ವಾಹನಗಳನ್ನು ತನಿಖೆ ಮಾಡಿಸಬೇಕು? ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬುದು ಗೊತ್ತಾಗುತ್ತಿಲ್ಲ. ಇಂಥ ಇಲಾಖೆಯಲ್ಲಿ ಇರತಕ್ಕ ಇಂಥ ವಾಹನದ ವಿಚಾರದಲ್ಲಿ ಇಂಥ ಅಧಿಕಾರಿಯಿಂದ ದುರುಪಯೋಗವಾಗಿದೆ ಎಂದು ನಿರ್ದಿಷ್ಟವಾದ ಮಾಹಿತಿಯನ್ನು ಮಾನ್ಯ ಸದಸ್ಯರು ತಂದು ಕೊಟ್ಟರೆ ಅದರ ಬಗ್ಗೆ ತನಿಖೆ ಮಾಡಿಸಿ ತಪ್ಪಿಸ್ಥರ ವಿರುದ್ಧ ಉಗ್ರಕ್ರಮವನ್ನಾ ತೆಗೆದುಕೊಳ್ಳುತ್ತೇನೆ, ದುರುಪಯೋಗವಾಗುವುದಿಲ್ಲ ಎಂದು ನಾನು ಹೇಳುವುದಿಲ್ಲ, ದುರುಪಯೋಗವಾಗುತ್ತದೆ. ಕೆಲವುಕಡೆ ಸಣ್ಣ ಪುಟ್ಟ ಕಳ್ಳತನಗಳೂ ಆಗುತ್ತವೆ. ಅನುಪಯುಕ್ತವೆಂದು ಕಂಡುಬಂದ ಮೇಲೆ ೩–೪ ವರ್ಷ ಎಂದು ನಿಗದಿಪಡಿಸಿ ನಂತರ ಅವುಗಳನ್ನು ಸಾರ್ವಜನಿಕವಾಗಿ ನಾವು ಹರಾಜು ಹಾಕಿದರೆ ಅವುಗಳ ರೀ ಸೇಲ್ ವ್ಯಾಲೂ ಜಾಸ್ತಿ ಇರುತ್ತದೆ. ಆದ್ದರಿಂದ ನಮ್ಮ ಸರ್ಕಾರಕ್ಕೆ ಹೆಚ್ಚಿನ ನಷ್ಟವಾಗುವುದರ ಬದಲು ಲಾಭವಾಗುತ್ತದೆಂದು ನನ್ನ ಅಭಿಪ್ರಾಯವನ್ನು ಸೂಚಿಸಿದ್ದೇನೆ.

ಶ್ರೀ ಕೆ. ವಸಂತ ಬಂಗೇರ.— ಸ್ವಾಮಿ, ಯಾವ ಇಲಾಖೆಯಲ್ಲಿ, ಯಾವ ವಾಹನದ ಬಗ್ಗೆ ಎಂಬುದನ್ನು ತಿಳಿಸಬೇಕೆಂದು ತಾವು ಹೇಳಿದಿರಿ. ನಾನು ಹೇಳುತ್ತೇನೆ, ಕೇವಲ ಒಂದೆರಡು ಇಲಾಖೆಯಲ್ಲಿಲ್ಲ. ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಹಾಳಾಗಿ ನಿಂತಿರತಕ್ಕ ವಾಹನಗಳನ್ನು ತಾವು ತನಿಖೆ ಮಾಡಿಸಬೇಕು. ತನಿಖೆಗೆ ಆದೇಶವನ್ನು ಕೊಟ್ಟ ಮೇಲೆ ತಮಗೆ ಯಾವ ಯಾವ ವಾಹನಗಳಲ್ಲಿ ಇಂಜಿನ್‌ಗಳಿವೆ ಅಥವಾ ಇಲ್ಲ, ಪಾರ್ಟ್ಸ್ ಇವೆ ಅಥವಾ ಇಲ್ಲ, ಎಂಬುದು ತಮಗೆ ತಿಳಿಯುತ್ತದೆ. ಆಗ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ:— ನಾವು ಈಗ ಯಾವ ಕಮಿಟಿಯನ್ನು ನೇಮಕ ಮಾಡಿದ್ದೇವೆ ಆ ಕಮಿಟಿಯವರಿಗೇ ಹೇಳಿ ಇದನ್ನು ತನಿಖೆ ಮಾಡಿಸುತ್ತೇನೆ.

ಸಚಿವರುಗಳ ಹಾಗೂ ಇತರರ ಆಪ್ತ ಸಿಬ್ಬಂದಿವರ್ಗ

೨೦೫೫. ಶ್ರೀ ಮಲ್ಲಿಕಾರ್ಜುನ ಖಾರ್ಗೆ(ಗುರುಮಿಟ್ಕಲ್).—ಮಾನ್ಯ ಮುಖ್ಯ ಮಂತ್ರಿಯವರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಚಿವರುಗಳು ಹಾಗೂ ಪಾರ್ಲಿಮೆಂಟರಿ ಫಂಕ್ಷನರಿಸ್ ಆಪ್ತ ಸಿಬ್ಬಂದಿವರ್ಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಯವರಿಗೆ ಕೊಡುತ್ತಿರುವ ವಿಶೇಷ ಭತ್ಯೆ ಎಷ್ಟು ?

ಆ) ಸದರಿ ಭತ್ಯವನ್ನು ಯಾವಾಗ ನಿಗಧಿಪಡಿಸಲಾಯಿತು ಹಾಗೂ ಅದನ್ನು ಹೆಚ್ಚು ಮಾಡದೆ ಇರುವುದಕ್ಕೆ ಕಾರಣವೇನು ?

ಇ) ಎಲ್ಲಾ ಹಂತದ ವಿಶೇಷ ಭತ್ಯೆಗಳನ್ನು ಹೆಚ್ಚಿಸಿದಂತೆ ಇದನ್ನೂ ಹೆಚ್ಚಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

೧. ಮುಖ್ಯ ಮಂತ್ರಿಯವರ/
ಮಂತ್ರಿಗಳ/ರಾಜ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿ.

ಅ) ಅಸಿಸ್ಟೆಂಟ್ ಕಮಿಷನರ್ ದರ್ಜೆ :
ಅಧೀನ ಕಾರ್ಯದರ್ಶಿ ದರ್ಜೆ :
ಅಥವಾ ಮೇಲ್ಪಟ್ಟ ಅಧಿಕಾರಿಗಳು. ೧೦೦-೦೦

ಆ) ಅಸಿಸ್ಟೆಂಟ್ ಕಮಿಷನರ್ ದರ್ಜೆ :
ಅಧೀನ ಕಾರ್ಯದರ್ಶಿ ದರ್ಜೆ :
ಇವರುಗಳಿಗಿಂತ ಕೆಳದರ್ಜೆಯ ಅಧಿಕಾರಿಗಳಿಗೆ
(ಎರಡನೇ ದರ್ಜೆ ಅಧಿಕಾರಿ) ೭೫-೦೦

೨. ವಿಶೇಷ ಕರ್ತವ್ಯಾಧಿಕಾರಿ
(ಮುಖ್ಯ ಮಂತ್ರಿಯವರ ಕಾರ್ಯಾಲಯ) ೧೦೦-೦೦

೩. ಕಿರಿಯ ಸಹಾಯಕ/ಸಹಾಯಕ, ಶೀಘ್ರಲಿಪಿಗಾರ ೫೦-೦೦

೪. ಬೆರಳಚ್ಚುಗಾರ/ಕಿರಿಯ ಸಹಾಯಕ ೩೫-೦೦

೫. ವಾಹನ ಚಾಲಕ (ಡ್ರೈವರ್) ೫೦-೦೦

೬. ಆಟೆಂಡರ್ ೧೫-೦೦

ಆ) ದಿನಾಂಕ ೧-೪-೧೯೮೦ ಸದರಿ ವಿಷಯವು ಮೂರು ವೇತನ ಆಯೋಗದ ಮುಂದೆ ಇತ್ತು. ಆಯೋಗವು ಕೆಲವು ಶಿಫಾರಸ್ಸುಗಳನ್ನು ಮಾಡಿದೆ. ಅವು ಸರ್ಕಾರದ ಪರಿಶೀಲನೆಯಲ್ಲಿವೆ.

ಇ) ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,— ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆಯನ್ನು ಕೇಳಿದುದರ ಉದ್ದೇಶವಾದರೂ ಇಷ್ಟೆ. ಇದರಲ್ಲಿ ಕೆಲವೊಂದು ತಾರತಮ್ಯವಿದೆ. ಅದನ್ನು ಸರಿಪಡಿಸುವುದಕ್ಕೋಸ್ಕರ ಕೇಳಿದ್ದೇನೆ. ಅದನ್ನು ಡಿ. ಪಿ. ಎ. ಆರ್. ಸರಿಪಡಿಸುತ್ತದೆಯೇ ಅಥವಾ ಆಯೋಗದ ಶಿಫಾರಸ್ಸು ಬಂದ ಮೇಲೆ ಆ ತಾರತಮ್ಯವನ್ನು ಸರಿಪಡಿಸುತ್ತೀರಾ ಎಂದು ಕೇಳುತ್ತೇನೆ ? ಅದೇ ರೀತಿಯಲ್ಲಿ ಪಾರ್ಲಿಮೆಂಟ್ ಸೆಕ್ರೆಟರಿಯೇಟ್ ಆಫೀಸರ್ಸ್‌ಗಳಲ್ಲೂ ಕೂಡ ವ್ಯತ್ಯಾಸ ಇದೆ. ಅದಕ್ಕಾಗಿ ಶಿಫಾರಸು ಬಂದ ಮೇಲೆ ಸರಿಪಡಿಸುತ್ತಿರಾ ಅಥವಾ ಡಿಪಾರ್ಟ್‌ಮೆಂಟಲ್ ಕಮಿಟಿಯವರೇ ಸರಿಪಡಿಸುತ್ತಾರೆಯೇ ಎಂದು ಕೇಳುತ್ತೇನೆ.